ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ
ಸಿ.ಸಿ. ೮೮೨–೨೦೧೦
ಚಾ.ಸಾ.೫ ಪ್ರಾ.ಸಾ.೪

ಹೆಸರು : ಮಂಜಣ್ಣ
ಗಂಡ/ತಂದೆಹೆಸರು : ಶಿವಪ್ಪ
ವಯಸ್ಸು : ೩೪ ವರ್ಷ
ಕೆಲಸ : ಖಾಸಗಿ ಚಾಲಕ
ವಾಸ : ಗೊಟ್ಟಿಪುರ

ಪ್ರಮಾಣೀಕೃತ ದಿನಾಂಕಃ–೦೧.೦೨.೨೦೧೬

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ–**

ಚಾಸಾ.೧ರವರ ಪರಿಚಯ ನನಗೆ ಇದೆ ಅವರು ನಮ್ಮ ಗ್ರಾಮದ ಸರ್ಕಾರಿ ಶಾಲೆಯ ಶಿಕ್ಷಕಿಯಾಗಿದ್ದರು. ದಿ ೨೫.೦೮.೨೦೧೦ರಂದು ಬೆಳಿಗ್ಗೆ ೧೦.೦೦ ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ.೬ರವರು ಹೊಸಕೋಟೆಗೆ ಬರಲು ನನಗೆ ಸೇರಿದ ವಾಹನದಲ್ಲಿ ಬರುತ್ತಿರುವಾಗ ಕೋಲಾರ – ಹೊಸಕೋಟೆ ಹೈವೇಯ ಗೊಟ್ಟಿಪುರ ಬಳಿ ಚಾಸಾ.೧ರವರು ನಿಂತಿದ್ದು, ವಿಚಾರಿಸಲಾಗಿ ಯಾರೋ ಒಬ್ಬ ಆಸಾಮಿ ಆಕೆಯ ಕತ್ತಿನಲ್ಲಿದ್ದ ಬಂಗಾರದ ತಾಳಿ ಚೈನ್ನನ್ನು ಯಾರೋ ಒಬ್ಬ ಕಿತ್ತುಕೊಂಡು ನಮ್ಮ ಗ್ರಾಮದಿಂದ ಬರುವ ರಸ್ತೆಯ ಬಲಭಾಗದಲ್ಲಿರುವ ಪ್ಲಾನ್‌ಸ್ಟೇಷನ್ ಬಳಿ ಓಡಿ ಹೋಗಿರುವುದಾಗಿ ತಿಳಿಸಿದರು. ಅಷ್ಟರಲ್ಲಿ ಚಾಸಾ.೨ ಮತ್ತು ಇನ್ನೊಬ್ಬರು ಆ ವ್ಯಕ್ತಿಯನ್ನು ಹಿಡಿದುಕೊಂಡು ಬರುತ್ತಿದ್ದು, ಪರಿಶೀಲಿಸಿದಾಗ ಕಿತ್ತುಕೊಂಡಿದ್ದ ಬಂಗಾರದ ಚೈನ್ ಆತನ ಜೇಬಿನಲ್ಲಿತ್ತು. ಚಾಸಾ.೧ರವರು ಸದರಿ ಚೈನ್ ತನ್ನದೆಂದು ಹೇಳಿದರು. ಸದರಿ ಆಸಾಮಿಯು ಚೈನ್‌ನ್ನು ಎಳೆದಾಗ ಆಕೆಯ ಕತ್ತಿನ ಭಾಗ ಕೆಂಪಾಗಿತ್ತು. ನಂತರ ವಿಚಾರವನ್ನು ಹೊಸಕೋಟೆ ಪೋಲೀಸರಿಗೆ ದೂರವಾಣಿ ಮುಖಾಂತರ ತಿಳಿಸಿದ್ದು, ಪೋಲೀಸರು ಸ್ಥಳಕ್ಕೆ ಬಂದು ಆರೋಪಿತನನ್ನು ವಶಕ್ಕೆ ಪಡೆದರು. ಸಾಕ್ಷಿಯು ಫೋಟೋದಲ್ಲಿರುವ ಮಾಂಗಲ್ಯ ಸರವನ್ನು ನೋಡಿ ಗುರ್ತಿಸಿದ್ದು, ಸದರಿ ಫೋಟೋವನ್ನು ಈಗಾಗಲೇ ನಿಪಿ.೨ ಎಂದು ಗುರ್ತಿಸಲಾಗಿದೆ. ಆರೋಪಿತನನ್ನು ನೋಡಿದರೆ ಗುರ್ತಿಸುತ್ತೇನೆಂದು ಸಾಕ್ಷಿ ಹೇಳಿರುತ್ತಾರೆ.

**ಪಾಠಿ ಸವಾಲು ಆರೋಪಿ ಪರ ವಕೀಲರಿಂದಃ**

ಆ ದಿನ ನಾನು ಮತ್ತು ಚಾಸಾ.೬ ಹೀರೋಹೋಂಡಾ ಗ್ಲಾಮರ್ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದೆವು. ಸದರಿ ವಾಹನ ನನ್ನ ಸ್ನೇಹಿತನ ವಾಹನವಾಗಿದ್ದು, ಅದರ ಸಂಖ್ಯೆ ನನಗೆ ಗೊತ್ತಿಲ್ಲ. ಆ ದಿನ ನಾವು ಬೆಳಿಗ್ಗೆ ೯.೪೫–೧೦.೦೦ ಗಂಟೆ ಸಮಯದಲ್ಲಿ ಸ್ಥಳಕ್ಕೆ ಬಂದಿದ್ದೆವು. ನಾವು ಸ್ಥಳಕ್ಕೆ ಹೋದಾಗ ಚಾಸಾ.೧ ಒಬ್ಬರೇ ಅಲ್ಲಿ ನಿಂತಿದ್ದು, ದಾಸರಹಳ್ಳಿಯ ಜನಾರ್ಧನ್ ಹಾಗೂ ಇನ್ನೊಬ್ಬರು ಕೂಡಿಕೊಂಡು ಆರೋಪಿತನನ್ನು ಹಿಡಿದುಕೊಂಡು ಬರಲು ಹೋಗಿದ್ದರು. ನಡೆದ ಘಟನೆಯ ಬಗ್ಗೆ ಚಾಸಾ.೧ ನಮಗೆ ತಿಳಿಸುವ ಸಮಯದಲ್ಲಿ ಜನಾರ್ಧನ್ ಹಾಗೂ ಇನ್ನೊಬ್ಬ ಆರೋಪಿತನನ್ನು ಹಿಡಿದುಕೊಂಡು ಬರಲು ಹೋಗಿದ್ದು, ಆ ಸಮಯದಲ್ಲಿ ಸ್ಥಳದಲ್ಲಿ ಚಾಸಾ.೧ರವರನ್ನು ಹೊರತು ಪಡಿಸಿ ಬೇರೆ ಯಾರೂ ಇರಲಿಲ್ಲ.

ನಿಪಿ೨ರಲ್ಲಿ ಕಾಣುವ ಚೈನ್ ಎಷ್ಟು ಗ್ರಾಂ.ನದ್ದು ಎಂದು ನನಗೆ ಗೊತ್ತಿಲ್ಲ. ನಿಪಿ೨ರಲ್ಲಿ ಕಾಣುವ ಚೈನ್ ಸಾಮಾನ್ಯವಾಗಿ ಸೇಟು ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಿಪಿ೨ರಲ್ಲಿ ಕಾಣುವ ಚೈನ್ ಈ ಮುಂಚೆ ನಾನು ನೋಡಿಲ್ಲ ಎಂದರೆ ಸಾಕ್ಷಿಯು ಘಟನೆಯ ದಿನದಂದು ನೋಡಿದ್ದೆ ಎಂದು ಹೇಳುತ್ತಾರೆ.

ಚಾಸಾ.೧ ನಮ್ಮ ಗ್ರಾಮದಲ್ಲಿ ಶಿಕ್ಷಕಿಯಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನದಂದು ನಾನು ಸ್ಥಳಕ್ಕೆ ಹೋಗಿಲ್ಲ ಹಾಗೂ ಯಾವುದೇ ಘಟನೆ ನಡೆಯದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನದಂದು ಪೋಲೀಸರು ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿ ಸ್ಥಳದಲ್ಲಿ ಇರದಿದ್ದರೂ ಸಹ ನಾನು ಆತನ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,ಹೊಸಕೋಟೆ.